ಅ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಾ ಯೋಜನೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದಕ್ಕಾಗಿ ಸರ್ಕಾರವು ಏನೇನು ಪ್ರೋತ್ಸಾಹದ ಸವಲತ್ತುಗಳನ್ನು ನೀಡುತ್ತಿದೆ?

ಇ) ಇದರ ಪುನರ್ ಪ್ರಾರಂಭಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು).

ಅ) ಸ್ಥಗಿತಗೊಂಡಿಲ್ಲ.

ಆ) ರಾಜ್ಯಸರ್ಕಾರದ ಪ್ರೋತ್ಸಾಹದ ಸವಲತ್ತುಗಳು ಈ ಕೆಳಕಂಡಂತಿವೆ.

1) ಪುರುಷ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡುವವರಿಗೆ ರಾಜ್ಯಸರ್ಕಾರದವತಿಯಿಂದ ಹೆಚ್ಚುವರಿಯಾಗಿ ರೂ. 50 ಪ್ರೋತ್ಸಾಹಧನವನ್ನು ಮತ್ತು ಮಹಿಳಾ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ಹೆಚ್ಚುವರಿ ರೂ. 10 ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

2) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಗೆ ಒಳಪಡುವವರಿಗೆ ಅದೃಷ್ಟಚೀಟಿ ನೀಡುವ ಸಲುವಾಗಿ ಪ್ರತಿ ಜಿಲ್ಲೆಗೆ ಪ್ರತಿ ತಿಂಗಳಿಗೆ ರೂ. 15,000 ಮೊಬಲಗನ್ನು ನೀಡಲಾಗುತ್ತದೆ.

3) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಮನವೊಲಿಸುವ ಇಲಾಖೆಯ ಮತ್ತು ಇಲಾಖೇತರ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಗೆ ಒಂದು ವರ್ಷದಲ್ಲಿ ಒಟ್ಟು ಕೇಸುಗಳಿಗನುಸಾರವಾಗಿ ಪ್ರತಿ ಕೇಸಿಗೆ ರೂ. 15 ರಿಂದ 60 ರವರೆಗೆ ಪ್ರೇರೇಪಣಧನವನ್ನು ನೀಡಲಾಗುವುದು.

4) ಎರಡು ಮಕ್ಕಳು ಮತ್ತು ಕಡಿಮೆ ಮಕ್ಕಳದ್ದು ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗೆ ಒಳಪಡುವ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಭತ್ಯ ನೀಡಲಾಗುವುದು.

5) ಪ್ರತಿ ಉಪ ಕೇಂದ್ರಗಳಿಗೆ ಎರಡು ಸಾವಿನ ರೂ. ಮೌಲ್ಯದ ಔಷದಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

6) ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಿಗಾಗಿ ನಿರಂತರವಾಗಿ ಶಸ್ತ್ರಚಿಕಿತ್ಸೆಯ ಸೇವೆ ಒದಗಿಸುವ ಸಲುವಾಗಿ ಡೀಸಲ್ ಜನರೇಟರುಗಳನ್ನು ಒದಗಿಸಲಾಗಿದೆ.

7) ವಿವಿಧ ಹಂತಗಳಲ್ಲಿ ಕುಟುಂಬ ಕಲ್ಯಾಣ ಪ್ರಗತಿಯನ್ನು ನಿಯತಕಾಲಿಕವಾಗಿ ವಿಮರ್ಶಿಸುವ ಸಲುವಾಗಿ ಕುಟುಂಬ ಕಲ್ಯಾಣಕಾರ್ಯಕ್ರಮದ ಸಮಿತಿಗಳನ್ನು ಪುನರ್ ರಚಿಸಲಾಗಿದೆ.

8) ಕುಟುಂಬ ಕಲ್ಯಾಣ ಕಾರ್ಯಕ್ರಮದ ಅನುಷ್ಠಾನದಲ್ಲಿ ಕ್ರಿಯಾತ್ಮಕ ಪಾತ್ರವಹಿಸಲು ಸಾಂಸ್ಥಿಕ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳು ಪಾಲ್ಗೊಳ್ಳುವಂತೆ ಮಾಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ನಗರ ರಸ್ತೆ ಸಾರಿಗೆ ಸಂಸ್ಥೆಯ ಬಗ್ಗೆ.

(706) - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರುಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು ನಗರ ಸಾರಿಗೆಯನ್ನು ವಿಭಿಜಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಇದ್ದಲ್ಲಿ, ಅದನ್ನು ಯಾವಾಗ ಮಾಡಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):